ಮಳೆ ದಗ್ಗಟ್ಲಾಡುತ್ತಿತ್ತು. ಹಗಲೆಲ್ಲ ಬಿಸಿಲು ಮತ್ತು ಉಬ್ರ ಜಾಸ್ತಿ ಇದ್ದಿದ್ದರಿಂದ ಇವತ್ತು ಮಳೆ ಬಂದೇ ಬರುತ್ತೆ ಎನ್ನುವ ಒಕ್ಕಲುಮಕ್ಕಳ ಲೆಕ್ಕಾಚಾರ ಹುಸಿಯಾಗಿರಲಿಲ್ಲ. ಸಂಜೆಯಿಂದ ಒಂದೇ ಸಮನೆ ಸುರಿದ ಮಳೆಗೆ ಇಡೀ ಊರು ಸ್ತಬ್ದಗೊಂಡಿರುವಾಗ, ಪಂಚಾಯ್ತಿಯನ್ನ ಬೆಳಿಗ್ಗೆ ಮುಂದೂಡಿದ ಎಲೆತೋಟದ ಮಲ್ಲಪ್ಪನ ಮನಸು ಅಸಮಧಾನದ ಅಗ್ನಿಕುಂಡದಲ್ಲಿ ಅಡ್ಡಾಡುತ್ತಿತ್ತು. ಅದ್ಯಾವುದನ್ನೂ ಅರಿಯದ ಮಂಜಣ್ಣನ ಮನೆಯಲ್ಲಿ; ತಾಳ, ಡಕ್ಕಿಯ ಜೊತೆಗೆ ತಂಬೂರಿಯ ಸ್ವರ ಮಿಡಿಯುತ್ತಲೇ ಇತ್ತು.

ದೀಪ ಮುಡಿಸುವ ಹೊತ್ತಿನಿಂದ ಗುರುಪುತ್ರ ದಾಸಪ್ಪನ ಮುಂದಾಳತ್ವದಲ್ಲಿ ಆರಂಭಿಸಿದ ಭಜನೆಕಾರ್ಯ ಮಳೆಯ ಆರ್ಭಟವನ್ನೂ ಲೆಕ್ಕಿಸದೆ ಸಾಂಗವಾಗಿ ನಡೆದಿತ್ತು. ಊರಲ್ಲಿ ಯಾರಾದರೂ ತೀರಿಕೊಂಡು ರಾತ್ರಿಹೊತ್ತು ಮನೆಮುಂದೆ ಹೆಣವಿದ್ದರೆ, ಅವರು ಕರೆಯದೆ ಇದ್ರೂ ಬಂದು ರಾತ್ರಿಯೆಲ್ಲಾ ಭಜನೆ ಮಾಡುವ ಪರಿಪಾಟವಿರುವಾಗ, ತಮ್ಮಂತೆ ಗುರುಬೋಧ ತಗಂಡು ಗುರುವಿನಲ್ಲಿ ಲೀನವಾದ ಮಂಜಣ್ಣನ ತಂದೆ ಗಿಡ್ಡಹನುಮಪ್ಪನ ಮೂರುದಿನದ ಕಾರ್ಯೇವು ನಡೆಯುವಾಗ ಬರದೆ ಇರುತ್ತಾರೆಯೆ? ಊರುಂಡು ಮಲಗುವ ಹೊತ್ತಿನತನಕ ಭಜನೆ ಮಾಡಿದ ಮೇಲೆ ಈಗ ಗಳಿಗೆ ಹೊತ್ತಿನ ಮುಂಚೆ ಭಜನೆಯ ಜೊತೆಗೆ ಮಳೆಯ ಮುಸಲಧಾರೆಯೂ ನಿಂತಿದ್ದರಿಂದ ತಮ್ಮ ಮನೆಯಂಗಳದಲ್ಲಿ ನಿಂತು; ಮುರಿದು ಬಿದ್ದ ನುಗ್ಗೆಗಿಡ, ಬಾಳೆಗಿಡ, ಚಿಗರೆ ಮರದ ಕೊಂಬೆಗಳನ್ನ ಕತ್ತರಿಸಿ ಒಂದು ಮಗ್ಲಿಗೆ ಹಾಕುತ್ತಿದ್ದರು. ಸಣ್ಣ ಜಲಪಾತದ ಹಾಗೆ ಅಲ್ಲಣದ ನೀರು ಬೀಳುವ ಸದ್ದಾಲಿಸುತ್ತಾ ಕೆಲವರು ನಿಂತಿದ್ದರೆ, ಇನ್ನೂ ಕೆಲವರು; ಮೆಟ್ಟಿಲಿಲ್ಲದ ಮಾಳಿಗೆಮನೆಗೆ ಏಣಿ ಹಾಕ್ಕೊಂಡು ಹತ್ತಿ, ನಿಂತಿರೊ ನೀರನ್ನ ಪೊರಕೆಯಿಂದ ಗುಡಿಸುತ್ತಿದ್ದರು. ಆದರೆ ಚುರಿಕೆನೂ ಹಾಕಿಸದ ಮಂಜಣ್ಣನಂಥವರು ಇಂತಹ ಮಳೆಗಾಲದಲ್ಲಿ ಮಾತ್ರ ಚಡಪಡಿಸುತ್ತಿದ್ದರು. ಅದರಲ್ಲೂ ಮನೆ ತುಂಬಾ ಜನ ಇರುವಾಗ ಸೋರಿದ್ದು ಆತನ ಮನಸ್ಸಿಗೆ ಕಸಿವಿಸಿ ಉಂಟುಮಾಡಿತ್ತು.

“ಪಕ್ಕದ ಮನೆ ತಿಪ್ಪೇಶಣ್ಣ ಚುರಿಕೆ ಹಾಕಿಸಿದ್ದರಿಂದ ಅವರ ಮನೇಲಿ ಒಂದು ಹನಿ ತೊಟ್ಟಿಕ್ಕಿಲ್ವಂತೆ. ನಮ್ಮನೆ ನೋಡು, ಅಂಗೈ ಅಗಲ ಜಾಗ ಹಸನಾಗಿಲ್ಲ. ಎಲ್ಲಾ ಕಡೆನೂ ತಾತಾತೂತೆ. ದಂಡಕ್ಕೈಯೆ ದೋಸಕ್ಕೈತೆ ಹಿರೆಮಗನ ಮದುವೆಗಿಲ್ಲ ಅಮ್ಮಂಗೆ ಮನೆ ರಿಪೇರಿ ಮಾಡ್ಸಂಗಿಲ್ಲ. ಹೊಸದಾಗಿ ಕರ್ಲು ಹಾಕ್ಸು, ಇಲ್ಲಾಂದ್ರೆ ಕರ್ಲು ತೆಗಿಸಿ ಚುರಿಕೆನಾದ್ರು ಹಾಕ್ಸು ಮಾರಾಯ ಅಂದ್ರೆ ಕಿವಿಗೆ ಹಾಕ್ಕೊಳ್ಳಲ್ಲ” ಅಂತೇಳಿ ಮಂಜಣ್ಣನ ಹೆಂಡತಿ ಕವಿತಮ್ಮ ಗಾಯದ ಮೇಲೆ ಉಪ್ಪು ಸವರಿದಂತೆ ನೆರೆದ ಜನರ ಮುಂದೆ ಮಾತಾಡಿದ್ದು ಗಂಡನಿಗೆ ಹಿಡಿಸಲಿಲ್ಲ. ಮೂಡಲ ಮಕನಾಗಿಟ್ಟದ್ದ ಅಪ್ಪನ ಫೋಟೊಗೆ ಹಾಕಿದ ಗುಲಾಬಿ ಹೂವಿನ ಹಾರ, ಅದರ ಮುಂದಿನ ಎಡೆ, ಎರಡು ಕಡೆ ಹಚ್ಚಿಟ್ಟ ಹಣತೆಯನ್ನ ನೋಡುತ್ತಾ ಗಾಳಿಗೆ ಅಲ್ಲಾಡುವ ದೀಪದ ಕುಡಿಯಂತೆ ಕ್ಷಣಿಕ ಬದುಕಿನ ನಶ್ವರತೆ ಕುರಿತು ಗುರುಪುತ್ರ ದಾಸಪ್ಪ ಹಾಡಿದ ಭಜನೆ ಪದ ಹೇಳುತ್ತಲೇ ಅಪ್ಪನಿಲ್ಲದ ಮನೆಯಲ್ಲಿ ಆವರಿಸಿದ ಶೂನ್ಯತೆ, ಬರಿ ಮನೆಗಷ್ಟೆ ಅಲ್ಲ ಎನ್ನುವ ನೋವಿನಲ್ಲಿದ್ದ ಮಂಜಣ್ಣ ತನ್ನ ಹೆಂಡತಿ ಮೇಲೆ ಸಿಡುಮ್ನ ಸಿಟ್ಟಾಗಿ ಹೊರಗೆದ್ದು ಬಂದಿದ್ದ.

“ಅವರ ತಾತ ಕಟ್ಟಿಸಿದ ಮನೆಯನ್ನೊ ಅಭಿಮಾನಕ್ಕೆ ಹಳೆ ಮನೇಲಿದಾನೆ ಕಣವ್ವ, ಅವನು ಮನಸಿಗೆ ಹಾಕ್ಕೊಂಡ್ರೆ ಹೊಸ ಮನೆ ಕಟ್ಟಿಸೋದು ದೊಡ್ಡದಲ್ಲ. ಈಗವನು ನೋವಿನಲ್ಲಿರುವಾಗ ಮನೆ ವಿಚಾರ ಮಾತಾಡೊ ಯಾಳ್ಯೇವಲ್ಲ” ಅಂತೇಳಿ ಮಂಜಣ್ಣನ ಸೋದರತ್ತೆ ಹೇಳಿದ್ದು ಆತನಿಗೆ ಕೇಳಿಸಿತ್ತು. ಗಾಳಿ ಬಂದಾಗ ಜೊಳ್ಳು ತೂರಿಕೊಳ್ಳುವ ಹೆಂಡತಿಯ ಚಾಲಾಕಿ ಮಾತುಗಳು ಮಂಜಣ್ಣನಲ್ಲಿ ಅಸಮಾಧಾನ ಉಂಟುಮಾಡಿತ್ತು. ಮಳೆ ನಿಂತ ಮೇಲೆ ನೆಲಸೋಕಿಕೊಂಡು ಬೀಸುವ ತಂಗಾಳಿಗೆ ಮುಖವೊಡ್ಡಿ ತ್ಯಾವದ ನೆಲದಲ್ಲಿ ಸ್ವಲ್ಪ ಹೊತ್ತು ಬರಿಗಾಲಲ್ಲಿ ಅಡ್ಡಾಡಿದ್ದರಿಂದ ಕೋಪ ಅನ್ನೋದು ತಮ್ಣಯಾಗಿ, ಅವಳು ಹೇಳಿದ್ದರಲ್ಲೂ ನ್ಯಾಯ ಇದೆ. ಆದರೆ ಸಮಯ ಇದಲ್ಲ. ಮಳೆ ವರಪು ಕೊಟ್ರೆ ಈ ಮಳೆಗಾಲ ಮುಗಿಯುವುದರೊಳಗೆ ಚುರಿಕೆ ಹಾಕಿಸ ಬೇಕೆಂದುಕೊಂಡ. ಅಂಗಳದಲ್ಲಿ ಅಡ್ಡಾಡುವಾಗ ಮನೆ ಮುಂದಿನ ಚಿಗರೆಮರದ ಕೊಂಬೆ ಮುರಿದು ಬೈಕಿನ ಪಕ್ಕದಲ್ಲೆ ಬಿದ್ದಿದ್ದನ್ನ ತೆಗೆದು ಹಾಕಿದ. ಚರಂಡಿಯಲ್ಲಿ ನೀರು ಧುಮುಗುಟ್ಟಿಕೊಂಡು ಹೋಗುತ್ತಿದ್ದವು.

ಮಳೆ ಅನ್ನೋದು ಪೂರಾನಿಂತ ಮೇಲೆ ಊರಿಗೆ ಜೀವಕಳೆ ಬಂದಂತಾಗಿ ಒಬ್ಬೊಬ್ಬರೆ ಹೊರಗೆ ಬಂದು; ದನಕರು, ಕುರಿಮೇಕೆಗಳ ಕಡೆ ಕಣ್ಣಾಯಿಸಿದರು.